# ವಸಹಾತುಶಾಹಿ ಕಾಲದ ಶಿಕ್ಷಣದ ಸಂತ: ಶ್ರೀ ತ್ಯಾಗಜೀವಿ ತಮ್ಮಣ್ಣಪ್ಪ ಚಿಕ್ಕೋಡಿ

ಸಂಗಮೇಶ ಕಚ್ಚು[1] & ಎಂ.ಎನ್. ಬೆನ್ನೂರ[2]

[1]ಎಂ.ಎ.ಪಿ. ಜಿ. ಡಿಪ್ಲೋಮಾ ಇನ್ ಆರ್ಕೈವಲ್ ಸ್ಟಡೀಸ್, (ಬಿ. ಎಡ್).

[2]ಮುಖ್ಯಸ್ಥರು, ಇತಿಹಾಸ ವಿಭಾಗ, ಎಸ್.ಟಿ.ಸಿ. ಕಾಲೇಜು, ಬನಹಟ್ಟಿ.

DOI: https://doi.org/10.5281/zenodo.17937922

## ABSTRACT:

ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ಉತ್ತಮ ಶಿಕ್ಷಣಚಿಂತಕರು ಮತ್ತು ಸಂಕಲ್ಪಬದ್ಧ ಸಾಮಾಜಿಕ ಕ್ರಾಂತಿಕಾರರು. 1929ರಲ್ಲಿ ಅವರು ಜನತಾ ಶಿಕ್ಷಣ ಸಂಘವನ್ನು ಸ್ಥಾಪಿಸಿ, ಬನಹಟ್ಟಿಯಲ್ಲಿ ಒಂದು ಆಂಗ್ಲೋ–ವೆರ್ನಾಕುಲರ್ ಶಾಲೆಯನ್ನು ಆರಂಭಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆಗೆ ನಾಂದಿ ಹಾಡಿದರು. ಹಿಂದುಳಿದ ಮತ್ತು ಒಗ್ಗಟ್ಟಿಲ್ಲದ ಸಮುದಾಯಗಳಿಗೆ ಶಿಕ್ಷಣದ ಮೂಲಕ ಸಬಲೀಕರಣ ನೀಡುವುದು ಅವರ ಜೀವನಧರ್ಮವಾಗಿತ್ತು. ಅವರ ದೃಷ್ಟಿ ಮತ್ತು ದಾನಶೀಲತೆಯಿಂದ ಜಮಖಂಡಿ, ಮುಧೋಳ, ರಾಯಬಾಗ್, ಅಥಣಿ ಮೊದಲಾದ ಪ್ರದೇಶಗಳ ಅನೇಕ ಯುವಕರು ದೂರದ ಮುಂಬೈಗೆ ತೆರಳಬೇಕಾದ ಅವಶ್ಯಕತೆ ಇಲ್ಲದೆ ತಮ್ಮ ಸ್ಥಳದಲ್ಲೇ ಕಾಲೇಜು ಶಿಕ್ಷಣ ಪಡೆಯುವ ಅವಕಾಶ ಪಡೆದುಕೊಂಡರು. ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆಯಿಂದ, ಶಿಕ್ಷಣವು ವರ್ಗಭೇದ ಮತ್ತು ಅಸಮಾನತೆಯನ್ನು ಮೀರಿ, ಸಮೃದ್ಧಿ ಮತ್ತು ಸಮಾನ ಅವಕಾಶಗಳ ಸುಂದರ ದಾರಿಯಾಗಿ ಬೆಳೆದುಬಂತು.

## KEYWORDS:

ಶಿಕ್ಷಣ, ಅಖಿಲ, ಚಿಕ್ಕೋಡಿ, ಗಲಗಲಿ, ಜನತಾ, ಅಬಕಾರ, ಕನ್ನಡ ಸಾಹಿತ್ಯ ಪರಿಷತ್ತು.

**ಪೀಠಿಕೆ:**

ತಮ್ಮಣ್ಣಪ್ಪ ಚಿಕ್ಕೋಡಿ ಅವರು ಶಿಕ್ಷಣತಜ್ಞರಾಗಿ ಮತ್ತು ದಾನಶೀಲ ಸಮಾಜಸೇವಕರಾಗಿ ಪ್ರಸಿದ್ಧರಾದವರು. 1935ರಲ್ಲಿ "ಜನತಾ ಶಿಕ್ಷಣ ಸಂಘ" (Janata Shikshan Sangha) ಸ್ಥಾಪಿಸಿ, ಅವರು ಗ್ರಾಮೀಣ ಹಾಗೂ ದುರ್ಬಲ ವರ್ಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಸುಲಭ ದರದಲ್ಲಿ ರವಾನಿಸುವುದನ್ನು ತಮ್ಮ ಧ್ಯೇಯವನ್ನಾಗಿಸಿಕೊಂಡಿದ್ದರು. ಚಿಕ್ಕೋಡಿ ಅವರ ವಿಚಾರಧಾರೆಯು ವಿಶೇಷವಾಗಿ ಸಮಾಜದ ಹಿಂದುಳಿದ ವರ್ಗಗಳ – ವಿಶೇಷವಾಗಿ ನೇಕಾರ ಸಮುದಾಯದ – ಸಬಲೀಕರಣದ ಮೇಲೆ ಕೇಂದ್ರಿತವಾಗಿತ್ತು. ಅವರು ಆರಂಭಿಸಿದ "ಆಂಗ್ಲೋ–ವರ್ನಾಕ್ಯುಲರ್ ಶಾಲೆ" ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಣದ ಬಡಾವಣೆಯನ್ನು ಮುರಿದುಹಾಕಿದ ಪ್ರಮುಖ ಹೆಜ್ಜೆಯಾಗಿದೆ. ಅವರ ಶೋಷಿತ ವರ್ಗದ ಮೇಲಿನ ಕಾಳಜಿಯನ್ನು ಪ್ರತಿಬಿಂಬಿಸುವಂತೆ, ಜನತಾ ಶಿಕ್ಷಣ ಸಂಘದಲ್ಲಿ ನಂತರ "ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಕಲಾ ಮತ್ತು ವಾಣಿಜ್ಯ ಕಾಲೇಜು, ಬನಹಟ್ಟಿ" ಎಂಬ ಮಹಾವಿದ್ಯಾಲಯ ಸ್ಥಾಪಿಸಲಾಯಿತು. ಈ ಕಾಲೇಜಿನ ಧ್ಯೇಯವು, ಅವರ ಸಂದೇಶದಂತೆ, ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರಿಗೆ ಉನ್ನತ ಶಿಕ್ಷಣವನ್ನು "ಬಾಗಿಲಿಗೆ ಹತ್ತಿರ" ತರುವುದಾಗಿದೆ. ತಮ್ಮಣ್ಣಪ್ಪ ಚಿಕ್ಕೋಡಿ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆ ಪ್ರಕಟವಾಗಿರುವುದು, ಅವರ "ಸ್ಥಾಪಕ ಪಿತಾಮಹ" ಸ್ಥಾನದಿಂದ ಎಷ್ಟೊಂದು ಜನರಿಗೆ ಶಿಕ್ಷಣದ ದಾರಿ ತೆರೆಯಿತು ಎಂಬಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಅಷ್ಟೇ ಅಲ್ಲದೆ, ಅವರು ಶಿಕ್ಷಣವನ್ನು ಜಾತಿ ಮತ್ತು ಧಾರ್ಮಿಕ ಅಡ್ಡಿಯಲ್ಲದೆ ಸಮಾಜಸೇವೆಯ ಶಕ್ತಿ ಆಗಬೇಕೆಂದು ನಂಬುತ್ತಿದ್ದರು.

**ಜನನ – ಬಾಲ್ಯ ಶಿಕ್ಷಣ**

ತಮ್ಮಣ್ಣಪ್ಪ ಚಿಕ್ಕೋಡಿಯವರ ತಂದೆ–ತಾಯಿಯವರು ಮಿಣಜಗಿಯ ಮೂಲದಿಂದ ಬಂದು ಚಿಕ್ಕೋಡಿಯಲ್ಲಿ ನೆಲೆಸಿದರು. ಆದರೆ ತಮ್ಮಣ್ಣಪ್ಪನವರು 1862 ಸೆಪ್ಟೆಂಬರ್ 2 ರಂದು ಮಿಣಜಗಿ ಎಂಬಲ್ಲಿ ಸತ್ಯಪ್ಪ ಮತ್ತು ಮಹಾದೇವಮ್ಮರ ಎರಡನೇ ಪುತ್ರನಾಗಿ ಜನಿಸಿದರು. ಮುಂಬೈ ಕರ್ನಾಟಕ ಪ್ರಾಂತ್ಯದಲ್ಲಿ ಸಂಸ್ಥಾನಿಕರ ಆಡಳಿತ ಇರುವುದರಿಂದ ಈ ಪ್ರದೇಶದಲ್ಲಿ ಮರಾಠಿ ಭಾಷೆಯು ಅತ್ಯಂತ ಪ್ರಭಾವಶಾಲಿಯಾಗಿತ್ತು. ಪ್ರಾಥಮಿಕ ಶಿಕ್ಷಣವನ್ನು ಮರಾಠಿಯಲ್ಲಿ ಪಡೆದರು. ನಂತರದಲ್ಲಿ ಕುಟುಂಬವು ಚಿಕ್ಕೋಡಿಯನ್ನು ಬಿಟ್ಟು ರಬಕವಿಗೆ ಬಂದಿತು. ನಂತರದಲ್ಲಿ ರಬಕವಿ, ಬನಹಟ್ಟಿ, ಮುಧೋಳ ಈ ಪ್ರಾಂತ್ಯದಲ್ಲಿ ಕನ್ನಡ ಮಾತನಾಡುವವರು ಹೆಚ್ಚಿದ್ದರೂ, ಇಲ್ಲಿಯ ಜಮಖಂಡಿ ಸಂಸ್ಥಾನದ ಆಳ್ವಿಕೆಯಲ್ಲಿ ಮರಾಠಿ ಹೆಚ್ಚು ಪ್ರಚಲಿತದಲ್ಲಿತ್ತು. ತಮ್ಮಣ್ಣಪ್ಪನವರು ಕನ್ನಡದ ಒಲವು ಹೊಂದಿದ್ದರಿಂದ ತಮ್ಮ ಸ್ವ ಪ್ರಯತ್ನದಿಂದ ಕನ್ನಡ ಕಲಿತು ಪ್ರಾಥಮಿಕ ಪರೀಕ್ಷೆಯನ್ನು ಬಿಜಾಪುರದ ಗಲಗಲಿ ಗ್ರಾಮದಲ್ಲಿ ಮುಗಿಸಿ, ನಂತರದಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ಕಲಾದಗಿ ಎಂಬಲ್ಲಿ ಪಾಸು ಮಾಡಿದರು.

**ವೃತ್ತಿ:**

ತಮ್ಮಣ್ಣಪ್ಪನವರಿಗೆ ಬಡತನವಿದ್ದ ಕಾರಣ ಪೊಲೀಸ್ ನೌಕರಿಗೆ ಸೇರಿದರು. ಈ ಕೆಲಸದಲ್ಲಿ ತೃಪ್ತಿ ಇಲ್ಲದ ಕಾರಣ ಕೆಲಸವನ್ನು ಬಿಟ್ಟು, ನಂತರದಲ್ಲಿ ರಬಕವಿಯ ಕನ್ನಡ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಕನ್ನಡ ಪರವಾಗಿ ಕಂಕಣಕಟ್ಟಿ ನಿಂತರು. ಜಾಣ ವಿದ್ಯಾರ್ಥಿಗಳನ್ನು ಕಂಡು ತಕ್ಷಣವೇ ಸ್ವಂತ ಖರ್ಚಿನಲ್ಲಿ ಅವರನ್ನು ಶಾಲೆಗೆ ಸೇರಿಸಿದರು.

**ವಿವಾಹ:**

ತಮ್ಮಣ್ಣಪ್ಪನವರು ರಬಕವಿಯ ಗಂಡು ಮಕ್ಕಳ ಶಾಲೆಯಲ್ಲಿ ಕಾರ್ಯ ನಿರ್ವಹಿಸುವಾಗ ಗಂಗವ್ವ ಎಂಬ ಹೆಣ್ಣು ಮಗಳೊಂದಿಗೆ ವಿವಾಹವಾಯಿತು. ಇವರಿಗೆ ಭಾಗೀರಥಿ ಎಂಬ ಹೆಣ್ಣು ಮಗಳು ಜನಿಸಿದಳು. ಇವಳನ್ನು ಡಾ. ಫ. ಗು ಹಳಕಟ್ಟಿ ಅವರಿಗೆ ಕೊಟ್ಟು ವಿವಾಹ ಮಾಡಿಸಿದರು. ಗಂಗವ್ವ ಕೆಲವೇ ದಿನಗಳಲ್ಲಿ ಮರಣ ಹೊಂದಿದರು. ನಂತರದಲ್ಲಿ ಬನಹಟ್ಟಿಯ ಅಬಕಾರ ಕುಟುಂಬದ ಅಲ್ಲಪ್ಪನ ಮಗಳಾದ ನೀಲವ್ವ ಎಂಬುವವಳನ್ನು ತಮ್ಮಣ್ಣಪ್ಪನವರು ವಿವಾಹವಾಗಿ ಅಬಕಾರ ಕುಟುಂಬದ ಜವಾಬ್ದಾರಿ ಹೊತ್ತರು. ತಮ್ಮಣ್ಣಪ್ಪ ಮತ್ತು ನೀಲವ್ವಗೆ ಒಂದು ಗಂಡು ಮಗುವಾಯಿತು. ಬಲವಂತ ಎಂದು ನಾಮಕರಣ ಮಾಡಿದರು. 7–8 ವರ್ಷವಿರುವಾಗಲೇ ಮರಣ ಹೊಂದಿದನು.

**ತಮ್ಮಣ್ಣಪ್ಪನವರ ಸಾಮಾಜಿಕ ಕಾರ್ಯಗಳು:**

**ಜೇಡರ ದಾಸಿಮಯ್ಯ ಪಂಗಡ ಸುಧಾರಣೆ**

27–05–1929 ರಂದು ಬಳ್ಳಾರಿಯ ಕೊಟ್ಟೂರು ಗ್ರಾಮದಲ್ಲಿ ಜೇಡರ ದಾಸಿಮಯ್ಯ ಪುರಾಣೋತ್ಸವ ಜರುಗಿತು. ಆ ಸಂದರ್ಭದಲ್ಲಿ ಡಾ. ಫ. ಗು ಹಳಕಟ್ಟಿಯವರನ್ನು ಕಾರ್ಯಕ್ರಮದ ಕೇಂದ್ರ ಬಿಂದುವಾಗಿ ಮಾಡಿದರು. ಅಲ್ಲಿ ನೇಕಾರಿಕೆ ಕುರಿತಾಗಿ ಈ ಸಮುದಾಯದ ಸುಧಾರಣೆಗೆ ಶ್ರಮಿಸಿದರು.

**ನೇಕಾರರ ನಾಯಕ**

ಪ್ರಸ್ತುತ ಬಾಗಲಕೋಟ ಜಿಲ್ಲೆಯ ಬನಹಟ್ಟಿ, ರಬಕವಿ, ಮಹಾಲಿಂಗಪುರ, ತೇರದಾಳ ಈ ಭಾಗದ ಜನರ ಉದ್ಯೋಗ ನೇಕಾರಿಕೆ ಆಗಿತ್ತು. ಇವರ ಸ್ಥಿತಿಯನ್ನು ಸುಧಾರಿಸಲು ಹಲವಾರು ರೀತಿಯ ಸೌಲಭ್ಯ ಒದಗಿಸಿದರು. ಹೀಗಾಗಿ ತಮ್ಮಣ್ಣಪ್ಪನವರನ್ನು ನೇಕಾರರ ದೇವರು ಎಂದು ಕರೆಯುತ್ತಿದ್ದರು.

**ಧಾರ್ಮಿಕ ಕಾರ್ಯಗಳು**

**ಶಿವಾದ್ವೈತ್ಯ ಸಿದ್ಧಾಂತ ಪ್ರಚಾರ ಸಂಘ**

ಬನಹಟ್ಟಿಯಲ್ಲಿ 1848 ರಲ್ಲಿ ವೈಶಾಖ ಶುದ್ಧ ಷಷ್ಠಿ ಶುಭ ಮುಹೂರ್ತದಲ್ಲಿ ಯಲ್ಲಟ್ಟಿ ಹಿರೇಮಠದ ಅಧ್ಯಕ್ಷ ವೀರ ಸಂಗಯ್ಯ ಇವರ ಮಠದಲ್ಲಿ ಈ ಸಂಘ ಪ್ರತಿ ರವಿವಾರ ಸಭೆ ನಡೆಸಿ ಸಮಾಜ ಸುಧಾರಣಾ ಕಾರ್ಯ ನಡೆಸುತ್ತಿದ್ದರು.

**ಅಖಿಲ ಭಾರತ ಶ್ರೀ ಮದ್ವೀರಶೈವ ಮಹಾಸಭಾ**

9ನೇ ಶತಮಾನದಲ್ಲಿ ಧರ್ಮ ಮತ್ತು ಸಮಾಜದ ಏಳಿಗೆಗಾಗಿ ಪ್ರತಿ ಸಂಕಲ್ಪ ಮಾಡಿದರು. ಹಾನಗಲ್ ಕುಮಾರೇಶ್ವರ ಸ್ವಾಮಿಗಳು ಸ್ಥಾಪಿಸಿದ ವೀರಶೈವ ಮಹಾಸಭೆ ಮತ್ತು ತಮ್ಮಣ್ಣಪ್ಪನವರಿಗೆ ಅತಿ ಅವಿನಾಭಾವ ಸಂಬಂಧ. ಇವರು ಇದರ ಆಜೀವ ಸದಸ್ಯರಾಗಿದ್ದರು. ಮಹಾಸಭೆಗೆ ಠರಾವು ಕಳುಹಿಸುತ್ತಿದ್ದರು. 1903 ರಲ್ಲಿ ಧಾರವಾಡದಲ್ಲಿ ರಾಜಕೀಯ ಗ್ರಾಂಥಿಕ ಪರಿಷತ್ತು ಸಭೆ ಇತ್ತು. ಆಗ ಬಾಲಗಂಗಾಧರ ತಿಲಕ ಮತ್ತು ಗೋಖಲೆಯವರು ಸಹ ಆಗಮಿಸಿದರು. ಆಗ ತಮ್ಮಣ್ಣಪ್ಪನವರು ಸಹ ಪಾಲ್ಗೊಂಡಿದ್ದರು.

**ಧಾರವಾಡದಲ್ಲಿ ಅಖಿಲ ಭಾರತ ವೀರಶೈವ ಸಭೆ**

ಧಾರವಾಡದಲ್ಲಿ 1904 ರಲ್ಲಿ ಈ ಸಭೆ ನಡೆಯಿತು. ದಿನಾಂಕ 13, 14, 15 ಮೇ ರಂದು ಇವರು ಕಾರ್ಯಕ್ರಮದಲ್ಲಿ ಸಮುದ್ರ ಪರ್ಯಟನದ ಅವಶ್ಯಕತೆ ಇದೆ ಎಂಬ ಪ್ರಬಂಧವನ್ನು

ಮಂಡಿಸಿದರು.

**ಶರಣ ಸಿದ್ಧಾಂತ ಮತ್ತು ಸಮಾನತೆ ತತ್ವ ಆಚರಣೆ**

ಫ. ಗು ಹಳಕಟ್ಟಿ ಅವರ ವಚನ ವಾಙ್ಮಯದಿಂದ ತಮ್ಮಣ್ಣಪ್ಪನವರು ಶರಣರ ನುಡಿಗಳಿಗೆ ಮಾರು ಹೋಗಿದ್ದರು. 1928 ರಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳು ಅಥಣಿಗೆ ಬಂದಿದ್ದರು. ರಬಕವಿಯ ಭಾಗೋಜಿ ಮಠದವರು ಶ್ರೀಗಳನ್ನು ರಬಕವಿಗೆ ಕರೆಯಿಸಿದ್ದರು. ಆಗ ತಮ್ಮಣ್ಣಪ್ಪನವರು ಶ್ರೀಗಳಿಗೆ ಇಲ್ಲಿನ ಪ್ರವಚನ ಸಾಹಿತ್ಯ ಕುರಿತಾಗಿ ತಿಳಿಸಿದರು.

**ರಾಜಕೀಯ ಕಾರ್ಯಗಳು**

**ಜಮಖಂಡಿ ಸಂಸ್ಥಾನದಲ್ಲಿ ಸಾಮಾಜಿಕ, ರಾಜಕೀಯ ಜಾಗೃತಿ**

ಅಪ್ಪಾ ಸಾಹೇಬ ವಾಡವೆ ಮತ್ತು ಸದಾಶಿವ್ ದೊಂಡೆ ಪೆಂಡ್ಸೆ ವಕೀಲರಾಗಿದ್ದರು. ಇವರು ವಚನ ವಂಕಿ ಮತ್ತು ವಾಘ್‌ಧಾರಿಯ ಉತ್ಪಾದಿನಿ ಎಂಬ ಸಂಸ್ಥೆ ಹುಟ್ಟು ಹಾಕಿ ಇದರಿಂದ ಸಾಮಾಜಿಕ ರಾಜಕೀಯ ಕಾರ್ಯ ಮಾಡುತ್ತಿದ್ದರು. ಇವರೊಂದಿಗೆ ಬನಹಟ್ಟಿಯ ತಮ್ಮಣ್ಣಪ್ಪನವರು ಸೇರಿ ಕಾರ್ಯ ಮಾಡಿದ್ದರು. ಇದರಿಂದ ಜಮಖಂಡಿ ಸಂಸ್ಥಾನದಲ್ಲಿ ಉತ್ತಮ ಹೆಸರನ್ನು ಗಳಿಸಿದ್ದರು.

**ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್**

ಮಂದಗಾಮಿಗಳಿಂದ ಪ್ರೇರಿತರಾದ ತಮ್ಮಣ್ಣಪ್ಪನವರು ಖಾದಿ ವಸ್ತ್ರಧಾರಿಗಳಾಗಿದ್ದರು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನಗಳು ಜರುಗಿದಾಗ ಅಲ್ಲಿನ ಠರಾವುಗಳನ್ನು ಸ್ಥಳೀಯ ಜನರಿಗೆ ತಿಳಿಸುತ್ತಿದ್ದರು. ಅಲ್ಲದೆ 1915 ರಲ್ಲಿ ಶ್ರೀ. ಎಸ್. ಪಿ. ಸಿಂಹ ರವರ ಅಧ್ಯಕ್ಷತೆಯಲ್ಲಿ 31ನೇ ಕಾಂಗ್ರೆಸ್ ಮಹಾ ಅಧಿವೇಶನಕ್ಕೆ 25 ಜನ ಸದಸ್ಯರನ್ನು ಒಳಗೊಂಡ ದಕ್ಷಿಣ ಸಂಸ್ಥಾನಗಳ ಹಿತವರ್ಧಕ ಸಮಿತಿ ಕಾಂಗ್ರೆಸ್ ನಾಯಕರನ್ನು ನೋಡಿ ಕನ್ನಡ ಭಾಷಾ ಅಭಿವೃದ್ಧಿ ಬಗ್ಗೆ ತಮ್ಮಣ್ಣಪ್ಪನವರು ಮಾತನಾಡಿದರು. ನಂತರ 1928 ಕಲ್ಕತ್ತಾದಲ್ಲಿ ನಡೆದ 44 ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೂ ಹೋಗಿದ್ದರು.

**ಕರ್ನಾಟಕ ಏಕೀಕರಣದಲ್ಲಿ ಪಾತ್ರ**

19ನೇ ಶತಮಾನದಲ್ಲಿ ಕರ್ನಾಟಕ 20 ಆಡಳಿತಗಳಲ್ಲಿ ವಿಭಜಿಸಲ್ಪಟ್ಟಿತ್ತು. ಆದರೆ ಕರ್ನಾಟಕದ ವಿಶೇಷವಾಗಿ ಮುಂಬೈ ಕರ್ನಾಟಕದ ರಾಜರ ಆಳ್ವಿಕೆ ಇರುವುದರಿಂದ ಮರಾಠಿ ಭಾಷೆ ಹೆಚ್ಚು ಪ್ರಚಲಿತದಲ್ಲಿತ್ತು. ಹೀಗಿರುವಾಗ ಕರ್ನಾಟಕ ಏಕೀಕರಣದ ಚಳುವಳಿ ತೀವ್ರಗೊಂಡಾಗ ಬನಹಟ್ಟಿಯಲ್ಲಿ ಯುವಕರು, ಮರಾಠಿ ಬೋರ್ಡ್‌ಸುಗಳಿಗೆ ಡಾಂಬರು ಹಾಕಿದರು. ಸೇಂದಿ ಬನಗಳಿಗೆ ಬೆಂಕಿ ಇಟ್ಟರು. ತಂತಿ ಹರಿದು ಹಾಕಿದರು. ಮರಾಠಿ ನಾಮಫಲಕಗಳನ್ನು ಸುಟ್ಟರು. ಆಗ ತಮ್ಮಣ್ಣಪ್ಪನವರು ಯುವಕರಿಗೆ ಸ್ಪೂರ್ತಿ ನೀಡುತ್ತಿದ್ದರು. ಕರ್ನಾಟಕ ಏಕೀಕರಣದ ರೂವಾರಿಗಳಲ್ಲಿ ಪ್ರಮುಖರಾದ ಪಂಡಿತಪ್ಪ ಚಿಕ್ಕೋಡಿ ಅವರಿಗೆ ಬೆನ್ನೆಲುಬಾಗಿ ನಿಂತವರು ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿಯವರು ಎನ್ನಲಾಗಿದೆ.

**ಕನ್ನಡ ಸಾಹಿತ್ಯ ಪರಿಷತ್ತು**

1915ನೇ ಇಸವಿಯ 5ನೇ ತಾರೀಖಿನಂದು ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಯಿತು. ಇದರ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದರು. ತಮ್ಮ ಜೀವಿತಾವಧಿಯ ಸದಸ್ಯತ್ವವನ್ನು ಕಾಯ್ದುಕೊಂಡಿದ್ದರು. ಪ್ರತಿ ವರ್ಷ ಜರಗುವ ಸಾಹಿತ್ಯ ಸಮ್ಮೇಳನಕ್ಕೆ ಹಾಜರಾಗುತ್ತಿದ್ದರು. ನಂತರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಾರ್ಯ ಸಮಿತಿಗೆ

ಚುನಾವಣೆ ನಡೆದಾಗ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಂದ ತಮ್ಮಣ್ಣಪ್ಪ ಚಿಕ್ಕೋಡಿಯವರು ಆಯ್ಕೆಯಾಗಿದ್ದರು. ನಂತರದಲ್ಲಿ 1918ರಲ್ಲಿ ಧಾರವಾಡದಲ್ಲಿ ನಡೆದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು "ದೇಶಿಯ ಸಂಸ್ಥಾನಗಳೊಳಗಿನ ಕನ್ನಡ ಭಾಷೆಯ ಸ್ಥಿತಿ" ಎಂಬ ವಿಷಯದ ಮೇಲೆ ಪ್ರಬಂಧವನ್ನು ಮಂಡಿಸಿದರು. 1921 ರಲ್ಲಿ ಚಿಕ್ಕಮಗಳೂರಿನ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತಮ್ಮಣ್ಣಪ್ಪನವರು ಜಮಖಂಡಿ ಸಂಸ್ಥಾನವು ಕನ್ನಡ ಭಾಷೆಯ ಮೂಲಕ ಶಿಕ್ಷಣ ನೀಡಬೇಕು ಮತ್ತು ಮುಧೋಳ, ರಾಮದುರ್ಗ ಮುಂತಾದ ಕೋರ್ಟ್, ಕಚೇರಿ ಮತ್ತು ಶಾಲೆಗಳಲ್ಲಿ ಕನ್ನಡ ಭಾಷೆ ಜಾರಿ ಆಗಬೇಕೆಂದು ಠರಾವು ಪಾಸು ಮಾಡಿದರು. 1923 ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವು ಬಿಜಾಪುರದಲ್ಲಿ ನಡೆಯಿತು. ಅಲ್ಲಿ ತಮ್ಮಣ್ಣಪ್ಪನವರು ಕನ್ನಡ ಏಳಿಗೆ ಕುರಿತಾಗಿ ಠರಾವು ಪಾಸು ಮಾಡಿದರು. 1925 ರಲ್ಲಿ ಬೆಳಗಾವಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಇಲ್ಲಿ ಕನ್ನಡ ಭಾಷೆ ಕಡ್ಡಾಯವಾಗಿರಬೇಕು ಎಂದು ಠರಾವು ಪಾಸು ಮಾಡಿದರು. 1928 ರಲ್ಲಿ ಕಲಬುರ್ಗಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಮಖಂಡಿ ಸಂಸ್ಥಾನದ ಅಧಿಪತಿಗಳು ಮತ್ತು ಆಡಳಿತ ಕ್ಷೇತ್ರಗಳಲ್ಲಿ ಕನ್ನಡ ಶಾಲೆಗಳು ಸ್ಥಾಪಿಸಿ ಮತ್ತು ಕಲಬುರ್ಗಿ, ಬೀದರ ಜಿಲ್ಲೆಯಲ್ಲಿ ವರ್ತಕರು ಕನ್ನಡ ಭಾಷೆಯನ್ನು ಬಳಸಬೇಕೆಂದು ಠರಾವು ಪಾಸು ಮಾಡಿದರು. 1925 ರಲ್ಲಿ ಬೆಳಗಾವಿಯಲ್ಲಿ ನಡೆದ 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ತಮ್ಮಣ್ಣಪ್ಪನವರು ಕಾರ್ಯನಿರ್ವಹಿಸಿದರು.

**ಶೈಕ್ಷಣಿಕ ಕಾರ್ಯಗಳು**

**ಧಾರವಾಡ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ**

ತಮ್ಮಣ್ಣಪ್ಪ ಚಿಕ್ಕೋಡಿಯವರು ಈ ಸಂಸ್ಥೆಯ ಮೇಲೆ ಅಪಾರ ಗೌರವ ಹೊಂದಿದ್ದರು. ಈ ಸಂಸ್ಥೆಯು ಬೆಳೆಯಲು ಶ್ರಮಿಸಿದ ವ್ಯಕ್ತಿಗಳಾದ ಗಿಲಗಿಂಚಿ ಗುರುಸಿದ್ದಪ್ಪನವರು ಮತ್ತು ಅರಟಾಳ ರುದ್ರಗೌಡರ ಇವರ ಮೇಲೆ ಪ್ರಮಾಣ ಹೊಂದಿದ್ದರು. ಇವರ ನಿಕಟ ಸಂಬಂಧವೂ ಇತ್ತು. ಅರಟಾಳ ರುದ್ರಗೌಡರು ದೆಹಲಿಯಲ್ಲಿ ಸರ್ಕಾರದಿಂದ C. P. S. O ಪದವಿ ಪಡೆದ ಸಲುವಾಗಿ ತಮ್ಮಣ್ಣಪ್ಪನವರು ಅಭಿನಂದನ ಪತ್ರ ಬರೆದರು. ಅದು ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ಪ್ರಕಟಗೊಂಡಿತು.

**ರಬಕವಿ ಬನಹಟ್ಟಿ ಅವಳಿ ನಗರದಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ:**

19ನೇ ಶತಮಾನದಲ್ಲಿ ರಬಕವಿ ಬನಹಟ್ಟಿಯಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹಕ್ಕೂ ನಿಲುಕದ ಸ್ಥಿತಿಯಲ್ಲಿ ಇತ್ತು. ಇಂತಹ ಸಂದರ್ಭದಲ್ಲಿ ತಮ್ಮಣ್ಣಪ್ಪ ಚಿಕ್ಕೋಡಿಯವರು ಶಿಕ್ಷಣಕ್ಕೆ ಅಡಿಪಾಯ ಹಾಕಿದರು. ಜಮಖಂಡಿ ಸಂಸ್ಥಾನವು ಮರಾಠಿ ಭಾಷೆಯ ಪ್ರದೇಶವಾಗಿತ್ತು. ಇಂತಹ ಸಂದರ್ಭದಲ್ಲಿ ಕನ್ನಡ ಭಾಷೆಯ ಕುರಿತಾಗಿ ಒಲವು ತೋರಿದರು. ಹಲವಾರು ಮಕ್ಕಳಿಗೆ ಪಾಠಿ ಪುಸ್ತಕಗಳನ್ನು ಉಚಿತವಾಗಿ ನೀಡುತ್ತಿದ್ದರು. ಉದಾಹರಣೆಗೆ ಮಾಲಿಪುರದ ಒಬ್ಬ ಹುಡುಗ ಬಿ. ಎ ಪಾಸಾದನು. ಆ ಸುದ್ದಿಯನ್ನು ತಮ್ಮಣ್ಣಪ್ಪನವರಿಗೆ ತಿಳಿಸಲು ಬಂದಾಗ ಆ ಸುದ್ದಿ ಕೇಳಿ ತಮ್ಮಣ್ಣಪ್ಪನವರು ಸಂತೋಷಗೊಂಡು ಬನಹಟ್ಟಿಯ ಕಾಡಸಿದ್ದೇಶ್ವರ ದೇವರಿಗೆ ಕಾಯಿ ಒಡೆಯಲು ಹಣವನ್ನು ಕೊಟ್ಟು ಕಳಿಸಿದ್ದರಂತೆ. ಇಷ್ಟು ಶಿಕ್ಷಣ ಪ್ರೇಮಿಯಾಗಿದ್ದರು. ತಮ್ಮಣ್ಣಪ್ಪನವರು ಜಮಖಂಡಿ ಅರಸರಾದ ಸಂಕಲ್ಪ ಅವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಅರಸರೊಂದಿಗೆ ಹಲವಾರು ಪ್ರಶ್ನೆಗಳನ್ನು ಮಾಡುತ್ತಿದ್ದರು. ನಂತರದಲ್ಲಿ ತಮ್ಮಣ್ಣಪ್ಪನವರು ಜಮಖಂಡಿ ಸಂಸ್ಥಾನದ ಶಾಲಾ ಸಮಿತಿಯ ಸದಸ್ಯರಾಗಿದ್ದರು. ಜಮಖಂಡಿ ಸಂಸ್ಥಾನದಲ್ಲಿ 72 ಮರಾಠಿ ಪ್ರಾಥಮಿಕ ಶಾಲೆಗಳಿದ್ದವು. ಅವುಗಳಲ್ಲಿ 56 ಶಾಲೆಗಳನ್ನು

ಕನ್ನಡಮಯವಾಗಿ ಮಾರ್ಪಾಡಿಸಿದ ಕೀರ್ತಿ ತಮ್ಮಣ್ಣಪ್ಪನವರಿಗೆ ಸಲ್ಲುತ್ತದೆ.

**ತಮ್ಮಣ್ಣಪ್ಪ ಚಿಕ್ಕೋಡಿಯವರು ಸ್ಥಾಪಿಸಿದ ಜನತಾ ಸಂಘ**

ಶಿಕ್ಷಣ ಪ್ರೇಮಿಯಾದ ತಮ್ಮಣ್ಣಪ್ಪನವರು ಬನಹಟ್ಟಿಯಲ್ಲಿ ಜನತಾ ಶಿಕ್ಷಣ ಸಮಿತಿಯೊಂದನ್ನು ಸ್ಥಾಪಿಸಿ ಅದರ ಮೂಲಕ ಶಿಕ್ಷಣ ಪ್ರಸಾರ ಮಾಡಲು ಬಯಸಿದರು. ಜಮಖಂಡಿ ಅರಸರ ಸಹಾಯದಿಂದ 1923 ರಲ್ಲಿ ಬನಹಟ್ಟಿಯಲ್ಲಿ ಆಂಗ್ಲೋ ವರ್ನಾಕ್ಯುಲರ್ ಶಾಲೆಯನ್ನು ಆರಂಭಿಸಿದರು. ಈ ಶಾಲೆಯಲ್ಲಿ ಮೊದಲಿಗೆ 01-03-1923ರಲ್ಲಿ 15 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದರು. ನಂತರದಲ್ಲಿ ಸಂಖ್ಯೆ ಹೆಚ್ಚಾಗುತ್ತಾ ಹೋಯಿತು. ಮುಂದಿನ ವಿದ್ಯಾಭ್ಯಾಸಕ್ಕಾಗಿ ಆಂಗ್ಲೋ ವರ್ನಾಕ್ಯುಲರ್ ಫಸ್ಟ್ ಗ್ರೇಡ್ ಶಾಲೆಯನ್ನು 1927ರಲ್ಲಿ ಆರಂಭಿಸಿದರು. ನಂತರದಲ್ಲಿ ಹೈ ಸ್ಕೂಲ್ ತೆರೆಯುವ ಕನಸು ಕಂಡಿದ್ದರು. ಅದು ನೆರವೇರಲಿಲ್ಲ. ಇವರ ಮರಣಾನಂತರ ಬನಹಟ್ಟಿಯಲ್ಲಿ ಜನತಾ ಶಿಕ್ಷಣ ಸಂಘ ಸ್ಥಾಪನೆಯಾಗಿ 1929 ರಲ್ಲಿ ಶ್ರೀಮಂತ ರಾಮಚಂದ್ರಪ್ಪ ಸಾಹೇಬ್ (SRA) ಎಂಬ ಹೈಸ್ಕೂಲ್ ಆರಂಭವಾಯಿತು. 1972 ರಲ್ಲಿ ಪದವಿ ಪೂರ್ವ ಹಂತದ ಕಾಲೇಜು ಆರಂಭಿಸಿದರು. 1975 ರಲ್ಲಿ ವಾಣಿಜ್ಯ ಪದವಿ ಕಾಲೇಜನ್ನು ಶ್ರೀ ತಮ್ಮಣ್ಣಪ್ಪ ಚಿಕ್ಕೋಡಿ ಅವರ ಹೆಸರಿನಲ್ಲಿ ಆರಂಭಿಸಿದರು. ಇದು ಇಂದು ಉತ್ತರ ಕರ್ನಾಟಕದ ಬೃಹತ್ ಶಿಕ್ಷಣ ಸಂಘವಾಗಿ ಬೆಳೆದು ನಿಂತಿದೆ. ಮುಂದೆ 1982 ರಲ್ಲಿ ಕಲಾ ವಿಭಾಗ, 1999 ರಲ್ಲಿ ಬಿಬಿಎ, ಬಿಸಿಎ ಆರಂಭವಾಯಿತು.

**ವಚನ ಪಿತಾಮಹ ಫ. ಗು. ಹಳಕಟ್ಟಿ ಅವರನ್ನು ರೂಪಿಸಿದ ಶಿಲ್ಪಿ**

ತಮ್ಮಣ್ಣಪ್ಪ ಚಿಕ್ಕೋಡಿಯವರು ಫ. ಗು. ಹಳಕಟ್ಟಿಯವರಿಗೆ ತಮ್ಮ ಮಗಳಾದ ಭಾಗೀರಥಿಯವರನ್ನು 07-02-1896 ರಲ್ಲಿ ಕೊಟ್ಟು ವಿವಾಹ ಮಾಡಿಸಿದರು. ಆಗ ಫ. ಗು. ಹಳಕಟ್ಟಿ ಕೇವಲ 16 ವರ್ಷವಾಗಿತ್ತು. ಇದೇ ಸಂದರ್ಭದಲ್ಲಿ ಫ. ಗು. ಹಳಕಟ್ಟಿಯವರು ಧಾರವಾಡದಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿದರು. ನಂತರ ಇನ್ನೂ ಕಲಿಯುವ ಹಂಬಲದಲ್ಲಿಯೇ ಇದ್ದರು ಹಾಗೂ ನಗರಗಳಿಗೆ ಹೋಗಬೇಕಿತ್ತು. ಈ ಸಂದರ್ಭದಲ್ಲಿ ಮುಂಬೈನ ಸೇಂಟ್ ಝೇವಿಯರ್ ಕಾಲೇಜು ಸೇರಿದರು. ಇವರ ಖರ್ಚಿನ ಹಣದ ಜವಾಬ್ದಾರಿಯನ್ನು ತಮ್ಮಣ್ಣಪ್ಪನವರು ಹೊತ್ತುಕೊಂಡರು. ಫ. ಗು. ಹಳಕಟ್ಟಿಯವರು ವಕೀಲ ವೃತ್ತಿಯನ್ನು ಮುಗಿಸಿ ಬಂದು ತಂದೆ ಗುರುಬಸಪ್ಪನವರು ಎಲ್ಲಿ ವೃತ್ತಿ ಕೈಗೊಳ್ಳಲಿ ಎಂದು ಕೇಳಿದಾಗ ಗುರುಬಸಪ್ಪನವರು ತಮ್ಮಣ್ಣಪ್ಪನವರನ್ನು ಹೇಳು ಎಂದು ಹೇಳಿದರು. ಈ ರೀತಿಯ ಅಪಾರ ಒಲವನ್ನು ಹೊಂದಿದ್ದರು. ನಂತರದಲ್ಲಿ ಫ. ಗು. ಹಳಕಟ್ಟಿಯವರು ಸರ್ಕಾರಿ ನೌಕರಿ ಮಾಡಲು ಮುಂದಾದಾಗ ತಮ್ಮಣ್ಣಪ್ಪನವರು "ನನ್ನ ಮಗಳಾದ ಸೌ. ಭಾಗೀರಥಿಯ ಇನಾಮಿನ ವ್ಯವಹಾರದಲ್ಲಿರುವ ಹಣವನ್ನು ತೆಗೆದುಕೊಳ್ಳಿ" ಎಂದು ಆರ್ಥಿಕ ಪದ್ಧತಿಯ ವಿಶ್ವಾಸ ನೀಡಿದರು. ನಂತರದಲ್ಲಿ ಬನಹಟ್ಟಿಯ ಬಜಾರದಲ್ಲಿರುವ ಅಂಗಡಿಯ ಬಾಡಿಗೆ ಹಣವನ್ನು ಫ. ಗು. ಹಳಕಟ್ಟಿಯವರ ಓದಿಗೆ ಕೊಡುತ್ತಿದ್ದರು. ಅಂಗಡಿಯು ಸೌ. ಭಾಗೀರಥಿಯ ಹೆಸರಲ್ಲಿ ಇತ್ತು. ಬನಹಟ್ಟಿಯಲ್ಲಿರುವ ಹಲವಾರು ತಾಡೋಲೆಗಳು ಹಳೆಯ ಗ್ರಂಥದಲ್ಲಿರುವ ವಚನಗಳನ್ನು ಮತ್ತು ಗೋಟೆ ಗ್ರಾಮದಲ್ಲಿರುವ ಹೊರತಾಗಿರುವ ತಾಡೋಲೆಗಳ ಗ್ರಂಥದಲ್ಲಿರುವ ವಚನಗಳನ್ನು ಸಂಗ್ರಹಿಸಿ ಅವುಗಳ ಕುರಿತಾಗಿ ಚರ್ಚಿಸಿದರು. ನಂತರದಲ್ಲಿ 1910ರಲ್ಲಿ ಬಿಜಾಪುರ ಲಿಂಗಾಯತ ಅಭಿವೃದ್ಧಿ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿದರು. 1914ರಲ್ಲಿ ಸಿದ್ಧೇಶ್ವರ ಪ್ರೌಢಶಾಲೆ ಸ್ಥಾಪಿಸಿದರು. ಇವುಗಳೆಲ್ಲ ತಮ್ಮಣ್ಣಪ್ಪನವರಿಗೆ ಸ್ಫೂರ್ತಿಯ ಸೇವೆಯಾದವು. ನಂತರದಲ್ಲಿ ಜನತಾ ಶಿಕ್ಷಣ ಸಂಘದಲ್ಲಿರುವ ಪ್ರಾಥಮಿಕ ಶಾಲೆಗೆ "ಡಾ.

ಫ. ಗು. ಹಳಕಟ್ಟಿ ಪ್ರಾಥಮಿಕ ಶಾಲೆ" ಎಂದು ನಾಮಕರಣ ಮಾಡಿ ಅವರಿಗೆ ಗೌರವವನ್ನು ಸೂಚಿಸಲಾಗಿದೆ.

**1925 ರಲ್ಲಿ ಬೆಳಗಾವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ಸ್ವಾಗತಾಧ್ಯಕ್ಷರಾದಾಗ ಬರೆದ ಸ್ವರಚಿತ ಕವನ**

**ಜಯಮಕೆ ಜಯಮಕೆ ಸಿರಿಗನ್ನಡಕ್ಕೆ**
**ಲಯವಾಗಿ ಒಂದೆರಡು ಸುಖಗೊಡಲು ಲೋಕಕೆ ॥ಪ॥**

**ತುಂಗ ವಿಕ್ರಮದಿಂದೆ ಜಸವಡೆದ ಚಾಲುಕ್ಯ**
**ಗಂಗ ಪಲ್ಲವ ರಟ್ಟ ವಿಜಯನಗರಂ.**
**ಭಂಗವೀರದಿರುವ ಮೈಸೂರು ಮೊದಲಾದ**
**ಜಗದ್ವಿಖ್ಯಾತ ಪೆಸರಾಂತ ತಾಯೆನುಡಿಗೆ ॥೧॥**

**ಮುನ್ನ ಕವಿ ಚಕ್ರವತರ್ಯಾದಿ ಬಿರುದುಗಳನು**
**ಗನ್ನ ನೃಪ ಸಾಮ್ರಾಟರಿಂದೆ ಪಡೆದಾ.**
**ರನ್ನ ಪೊನ್ನರು ಷಡಕ್ಷರಿಯು ಲಕ್ಷ್ಮೀಶಾದಿ**
**ಚೆನ್ನ ವರಕವಿಗಳಂ ಪಡೆದ ತಾಯಿ ॥೨॥**

**ತನ್ನ ನೊಯ್ಯಲ್ಪ ನಿಜ ಭಕ್ತರಿಗೆ ಸವಿನುಡಿಯೇ**
**ಉನ್ನತಾತ್ಮಾನುಭವ ಜ್ಞಾನವನು**
**ಚೆನ್ನಾಗಿ ಬೋಧಿಸುತೆ ಬಗೆಯನ್ನು ರಂಜಿಸುತೆ**
**ಸತ್ಯಶರಣರ ನುಡಿಯ ಮರ್ಮವ ತಿಳಿಸುತ್ತೆ ॥೩॥**

**ಸತ್ಯದಾಸರ ಬೋಧಸುಧೆಯ ಕುಡಿಸಿ**
**ನಿತ್ಯ ಸುಖವನ್ನೀವ ಶ್ರೀ ರಾಮಲಿಂಗನೊಳ್**
**ಚಿತ್ತ ಲಯಗೊಳಿಪ ಕನ್ನಡವೆಣ್ಣಿಗೆ ॥೪॥**

1904 ರಲ್ಲಿ ಬಾಗಲಕೋಟೆಯಲ್ಲಿ ಜರುಗಿದ 4 ನೇ ಮಹಾವೀರಶೈವ ಮಹಾ ಸಭೆಯಲ್ಲಿ ಲಿಂಗಾಯತ ಧರ್ಮ ಸಮ್ಮೇಳನದಲ್ಲಿ ರಚಿಸಿದ ಕಂದ ಪದ್ಯ:

**ಇತಿಹಾಸಂ ಪೂರ್ವಜರಂ**
**ಸ್ಮೃತಿಗೊಳಿಪುದು ತೊರ್ಪುದುನ್ನತಿಯ ನಿಜಪಥವಂ.**
**ಹಿತ ಗೆವುದೆಲ್ಲ ಬಗೆಯಿಂ**
**ದಿತಿಹಾಸಂ ಮೃತರ ದೇಹ ಸಂಜೀವನವನಲ್ಕೆ**

ಈ ರೀತಿಯಾಗಿ ಹಲವಾರು ಸ್ವರಚಿತ ಕವನಗಳನ್ನು, ನಾಟಕಗಳನ್ನು, ಪದ್ಯಗಳನ್ನು ರಚಿಸುತ್ತಿದ್ದರು.

**ಮರಣ**

ತಮ್ಮಣ್ಣಪ್ಪನವರು ತಮ್ಮ ಜೀವನದ ಉದ್ದಕ್ಕೂ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ

ಕ್ಷೇತ್ರಗಳಲ್ಲಿ ತಮ್ಮ ಜೀವನ ಮುಡಿಪಾಗಿಸಿದ್ದರು. ಇವರ ವಯಸ್ಸು 71 ಆಗಿತ್ತು. ಆಗಿನ ಸಂದರ್ಭದಲ್ಲಿ ನವೆಂಬರ್ 14, 1933 ರಲ್ಲಿ ಕಾನೂನುಬದ್ಧವಾಗಿ ಮೃತ ಪತ್ರವನ್ನು ಬರೆಯಿಸಿದರು. ನಂತರದಲ್ಲಿ ಹೈಸ್ಕೂಲ್ ಅನ್ನು ಸ್ಥಾಪಿಸಲು ರಬಕವಿಯಲ್ಲಿದ್ದ ಅವರ ಮನೆಯನ್ನು ಅವರ ಚಿಕ್ಕಪ್ಪನ ಮಗನಾದ ರಾಮಪ್ಪ ಚಿಕ್ಕೋಡಿಯವರಿಗೆ 4000 ರೂಪಾಯಿಗೆ ಮಾರಿಸಿದರು. ಒಂದು ವೇಳೆ ಹೈಸ್ಕೂಲ್ ಅನ್ನು ಕಟ್ಟಲು ಆಗದಿದ್ದರೆ, 1, 000 ಹಣವನ್ನು ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಒಂದು ವಸತಿ ಗ್ರಹದ ಕೋಣೆ ಕಟ್ಟಲು ಕೋರಿ, ಉಳಿದ ಮೂರು ಸಾವಿರ ಹಣವನ್ನು ಬಡ್ಡಿಯಲ್ಲಿ ವಿದ್ಯಾವಂತ ಮಕ್ಕಳಿಗೆ ಸ್ಕಾಲರ್ ಶಿಪ್ ನೀಡಿ ಎಂಬ ವಿಲ್ ಅನ್ನು ಬರೆಯಿಸಿದ್ದರು. ಇದರ ಸಂಪೂರ್ಣ ಜವಾಬ್ದಾರಿಯನ್ನು ಫ. ಗು. ಹಳಕಟ್ಟಿ, ಪಂಡಿತಪ್ಪ ಚಿಕ್ಕೋಡಿಯವರಿಗೆ ಇದೆ ಎಂದು ಬರೆಯಿಸಿದ್ದರು. ನಂತರದಲ್ಲಿ ತಮ್ಮಣ್ಣಪ್ಪನವರು ಬದುಕಿದ್ದಾಗ ಡಾ. ನಂದಿಮಠ ಅವರಿಗೆ ಹೇಳಿದರು "ಏನೆಂದರೆ, ನನ್ನ ಮರಣದ ನಂತರ ನನ್ನ ಗ್ರಂಥಗಳನ್ನು, ಪುಸ್ತಕಗಳನ್ನು K. L. E. ಯ ಲಿಂಗರಾಜ ಕಾಲೇಜಿಗೆ ನೀಡಿ" ಎಂದು ತಮ್ಮಣ್ಣಪ್ಪ ಹೇಳಿದರು. ಅದೇ ರೀತಿಯಾಗಿ ಗ್ರಂಥರಾಶಿಯನ್ನು ಅವರ ಮರಣ ನಂತರ ಡಾ. ನಂದಿಮಠರವರು ಒಪ್ಪಿಸಿದರು. ಡಾ. ನಂದಿಮಠರವರು ಡಿಸೆಂಬರ್ 6, 1933 ರಂದು ಮರಣ ಹೊಂದಿದ್ದರು. ಇವರ ದೇಹವನ್ನು ಹಿರೇಮಠದಲ್ಲಿ ಮಣ್ಣು ಮಾಡಲಾಯಿತು. ನಂತರದಲ್ಲಿ ಜನತಾ ಶಿಕ್ಷಣದಲ್ಲಿರುವವರು ಸಮಾಲೋಚಿಸಿ ಹಿರೇಮಠದಲ್ಲಿರುವ ಆಸ್ತಿಯನ್ನು ತೆಗೆದುಕೊಂಡು ಬಂದು ಜನತಾ ಶಿಕ್ಷಣ ಸಂಘದ ಆವರಣದಲ್ಲಿ ಸಮಾಧಿಯನ್ನು ನಿರ್ಮಿಸಿದರು. 06-12-2000 ರಿಂದ ತಮ್ಮಣ್ಣಪ್ಪನವರ ಜಯಂತಿ ನಡೆಯಲು ಆರಂಭಿಸಿದ್ದು ಪ್ರತಿವರ್ಷವೂ ಕಾರ್ಯಕ್ರಮ ನಡೆಯುತ್ತದೆ.

**ಉಪಸಂಹಾರ**

ತಮ್ಮಣ್ಣಪ್ಪ ಚಿಕ್ಕೋಡಿಯವರ ಸಾಮಾಜಿಕ ಕಾರ್ಯಗಳು, ಗ್ರಾಮಾಭಿವೃದ್ಧಿ, ಶಿಕ್ಷಣ ಪ್ರಚಾರ ಮತ್ತು ಬಡವರಿಗೆ ಸಹಾಯದ ಮೂಲಕ ಸಮಾಜದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಮಹತ್ತರ ಪಾತ್ರವಹಿಸಿವೆ. ಅವರು ಸಮುದಾಯದ ಏಕತೆಯನ್ನು ಬಲಪಡಿಸಲು ನಡೆಸಿದ ಜಾಗೃತಿ ಕಾರ್ಯಕ್ರಮಗಳು ಗ್ರಾಮಸ್ಥರಲ್ಲಿ ಸಕ್ರಿಯ ಪಾಲ್ಗೊಳ್ಳುವ ಮನೋಭಾವ ಬೆಳೆಸಿವೆ. ಮಹಿಳಾ ಸಬಲೀಕರಣ, ಯುವಕರಿಗೆ ಮಾರ್ಗದರ್ಶನ ಮತ್ತು ಪರಿಸರ ಸಂರಕ್ಷಣೆಯಂತಹ ಕ್ಷೇತ್ರಗಳಲ್ಲಿ ಅವರ ಹಸ್ತಕ್ಷೇಪ ಸಾಮಾಜಿಕ ಬದಲಾವಣೆಗೆ ಗಟ್ಟಿ ನೆಲೆ ನಿರ್ಮಿಸಿದೆ. ಅವರ ನಿಸ್ವಾರ್ಥ ಸೇವಾಭಾವ, ಪಾರದರ್ಶಕತೆ ಮತ್ತು ಮಾನವೀಯ ಮೌಲ್ಯಗಳ ಪ್ರಚಾರವು ಸಾರ್ವಜನಿಕ ಜೀವನದಲ್ಲಿ ಜವಾಬ್ದಾರಿಯುತ ನಾಗರಿಕತೆಯ ಮಾದರಿಯಾಗಿವೆ. ಅವರ ಪ್ರಜ್ಞಾವಂತ ನಾಯಕತ್ವವು ಸಾರ್ವಜನಿಕ ಸಂಪನ್ಮೂಲಗಳ ಸುಸೂತ್ರ ಬಳಕೆಗೆ ಮಾರ್ಗದರ್ಶಿಯಾಗಿದ್ದು, ಸ್ಥಳೀಯ ಸಂಸ್ಥೆಗಳು ಜನಕೇಂದ್ರೀಕೃತ ಆಡಳಿತದತ್ತ ಹೆಜ್ಜೆ ಇಡುವಂತೆ ಪ್ರೇರೇಪಿಸಿದೆ. ಆರೋಗ್ಯ ಶಿಬಿರಗಳು, ಸ್ವಚ್ಛತಾ ಅಭಿಯಾನಗಳು ಮತ್ತು ಕ್ರೀಡಾ ಚಟುವಟಿಕೆಗಳ ಮೂಲಕ ಅವರು ಸಮಾಜದ ಎಲ್ಲ ವರ್ಗಗಳನ್ನೂ ಅಭಿವೃದ್ಧಿಯ ಪ್ರವಾಹದಲ್ಲಿ ಒಳಗೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಈ ಎಲ್ಲಾ ಕಾರ್ಯಗಳು ಅವರ ಮಾನವಸೇವೆಯ ಸಂಕಲ್ಪವನ್ನು ಪ್ರತಿಬಿಂಬಿಸುತ್ತವೆ ಮತ್ತು ಸಮಾನತೆ, ನ್ಯಾಯ, ಸಹಕಾರದ ಮೌಲ್ಯಗಳನ್ನು ಬೇರೂರಿಸುತ್ತವೆ. ಇದರಿಂದ ಸ್ಥಳೀಯ ಸಮುದಾಯದ ದೀರ್ಘಕಾಲಿಕ ಬೆಳವಣಿಗೆಗೆ ಶಕ್ತಿಯಾದ ನೆಲೆ ರೂಪುಗೊಂಡಿದೆ.

## ಪರಾಮರ್ಶನ ಗ್ರಂಥಗಳು:


1. ಅಕ್ಕಿ ಉಮಾ., (2012), ಚಿಕ್ಕೋಡಿ ಕುಟುಂಬ ಒಂದು ಅಧ್ಯಯನ ಪಿ. ಎಚ್. ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ.
2. ಬೆಳಗಲಿ ದು. ನಿ., (1975), ಚಿಕ್ಕೋಡಿ ತಮ್ಮಣ್ಣಪ್ಪನವರು. ಪ್ರಕಾಶಕರು, ಪಿ. ಎನ್. ಕಾಮತ, ಐಬಿಎಚ್, ಬೆಂಗಳೂರು–560054.
3. ಕುಳ್ಳಿ, ಎಸ್. ಜಯವಂತ., (1983), ತಮ್ಮಣ್ಣಪ್ಪನವರು ಚಿಕ್ಕೋಡಿ. ಪ್ರಕಾಶಕರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.
4. ಕುಳ್ಳಿ, ಎಸ್. ಜಯವಂತ., (1982), ತಮ್ಮಣ್ಣಪ್ಪನವರು ಚಿಕ್ಕೋಡಿ. ಪ್ರಕಾಶಕರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ಗ್ರಂಥ ಪ್ರಕಟನಾ ದಾಸೋಹಿಗಳು, ಜನತಾ ಶಿಕ್ಷಣ ಸಂಘ ಬನಹಟ್ಟಿ. ಮುದ್ರಣ, ಬಿ. ಜೆ. ಧಾರವಾಡ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4. 0 International License.